ಅಷ್ಟು ಭಾಗಕ್ಕೆಲ್ಲಾ ಪೂರಾ ನಂಬರ್‌ಗಳನ್ನು ಮತ್ತು ಅಂಕಿ ಅಂಶಗಳನ್ನು ಕೊಡುತ್ತಾರೆ. ಇವೆಲ್ಲವೂ ಅಚ್ಚುಕಟ್ಟಾದ ಮೇಲೆ ಪೂರ್ಣಾಂಶಗಳು ಗೊತ್ತಾಗುತ್ತವೆ. ಮೊದಲು ಇವೆಲ್ಲವೂ ನಿರ್ದಿಷ್ಟವಾಗಿ ಗೊತ್ತಿರುವುದಿಲ್ಲ. ಅದರಲ್ಲಿಯೂ ಕೆಲವು ಕಡೆಗಳಲ್ಲಿ ಫೀಲ್ಡ್ ಚಾನರ್ಸ್ ಮಾಡಿರುವುದಿಲ್ಲ. ಆದ್ದರಿಂದ ಅಂಕಿ ಅಂಶಗಳು ಸರಿಯಾಗಿ ತಿಳಿಯದೇ ಇರುವುದರಿಂದ ಅವನ್ನು ಈಗ ಪರಿಶೀಲನೆ ಮಾಡಿ ಕೊಡುವ ಪರಿಸ್ಥಿತಿ ಬಂದಿದೆ. ಇತ್ತೀಚೆಗೆ ಅಸಿಸ್ಟೆಂಟ್ ಕಮಿಷನರ್ ಅವರು ಮತ್ತು ಎಗ್ಸಿಕ್ಯುಟಿವ್ ಇಂಜಿನಿಯರ್ ಅವರು—ಇವರಿಬ್ಬರೂ ಸ್ಥಳವನ್ನು ಅಜಮಾಯಿಷಿ ಮಾಡಿಸಿ ಯಾವ್ಯಾವ ಸರ್ವೆ ನಂಬರ್‌ಗಳಿಗೆ ನೀರು ಕೊಟ್ಟಿದೆ, ಫೀಲ್ಡ್ ಚಾನರ್ಸ್ ಎಲ್ಲೆಲ್ಲಿ ಮಾಡಿದ್ದಾರೆ, ಎಲ್ಲೆಲ್ಲ ಮಾಡಿಲ್ಲವೆನ್ನುವ ಬಗ್ಗೆ ವಿವರವಾಗಿ ಅಂಕಿ ಅಂಶಗಳನ್ನು ಸಂಗ್ರಹಿಸಿ ಸರಿಪಡಿಸಬೇಕೆಂದು ಹೇಳಿದೆ.

ಶ್ರೀ ಬಿ. ಇ. ರಾಮಯ್ಯ.—ಇವೆಲ್ಲವನ್ನೂ ತಯಾರು ಮಾಡುವುದಕ್ಕೆ ಇನ್ನೆಷ್ಟು ವರ್ಷಗಳು ಬೇಕ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಕೆಲವು ಕಡೆಗಳಲ್ಲಿ ನೀರು ಕೊಟ್ಟಿಲ್ಲವೆಂದು ವರದಿಮಾಡಿದೆ. ಕೂಡ್ಲಿಗಿ ತಾಲ್ಲೂಕು, ಮತ್ತು ಸಿರುಗುಪ್ಪ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿ ಅಧಿಕಾರಿಗಳು ಹೋಗಿ ನೀರು 'ಸರಬರಾಜಾಗದ ಜಮೀನಿಗೆ ಸಂಬಂಧಿಸಿದಂತೆ 7,71,479-63 ರೂಪಾಯಿಗಳನ್ನು ವಜಾ ಮಾಡಬೇಕೆಂದು ಹೇಳಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ 438 ಗ್ರಾಮಗಳಲ್ಲಿ ಕೇವಲ 200 ಗ್ರಾಮಗಳಲ್ಲಿ ಎಲ್ಲ ವಿಚಾರಗಳನ್ನೂ ಪರಿಶೀಲನೆ ಮಾಡಿದ್ದಾರೆ. ಇನ್ನು ಉಳಿದ ಗ್ರಾಮಗಳಲ್ಲಿಯೂ ಎಲ್ಲ ಅಂಶಗಳನ್ನು ಪರಿಶೀಲಿಸಿದ ಮೇಲೆ ಅಲ್ಲಿಯೂ ನೀರಿನ ದರವನ್ನು ವಜಾ ಮಾಡರಾಗುತ್ತದೆ.

ಶ್ರೀ ಬಿ. ಇ. ರಾಮಯ್ಯ.—ರೆವಿನ್ಯೂ ಅಥಾರಿಟೀಸ್ ಹೆರಾಸ್ ಮಾಡುವುದಿಲ್ಲವೆಂದು ಹೇಳಿದ್ದರೂ ಕೆಲವು ಕಡೆಗಳಲ್ಲಿ ಹೆರಾಸ್ ಮಾಡಿದ್ದರಿಂದ ಅದನ್ನು ತೆಗೆದುಕೊಳ್ಳರಾಗದೆ ಹೈಕೋರ್ಟಿಗೆ ಜನರು ಹೋಗಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನನ್ನ ಮುಂದಿರತಕ್ಕ ಅಂಕಿ ಅಂಶಗಳ ಪ್ರಕಾರ ಅವರಿಗೆ ಕಿರುಕುಳವಾಗಿಲ್ಲವೆಂದು ಇದೆ. ಕಿರುಕುಳ ಅಂದರೆ ಅದನ್ನು ಅನುಭವಿಸಿರುವವರ ಬಗ್ಗೆ ಪೋಲೀಸ್ ವರದಿಯನ್ನು ನೋಡಿದರೆ ಗೊತ್ತಾಗುತ್ತದೆ. ಹಳ್ಳಿಗಾಡುಗಳಲ್ಲಿ ನಡೆಯುತ್ತಾ ಇರತಕ್ಕ ಸ್ಥಿತಿ ಗತಿಗಳ ಬಗ್ಗೆ ಅಂಕಅಂಶಗಳನ್ನು ನೋಡಿ ಸ್ವಲ್ಪಮಟ್ಟಿಗೆ ಕಿರುಕುಳವಾಗಿದೆಯೆಂದು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ತಪ್ಪಿಸುವುದಕ್ಕೆ ಸಾಧ್ಯವಾದಷ್ಟು ಬೇಗ ಪ್ರಯತ್ನ ಮಾಡುತ್ತೇನೆ.

Agricultural Income Tax Returns

340. **Sri J. S. AMMANNAVAR** (Sadalga).—

Will the Minister for Finance be pleased to state.—

(*a*) the number of Agricultural Income Tax returns moved during the Agricultural Income Tax years 1966—67, 1967—68, 1968—69, 1969—70 and 1970—71 in each taluka of the Belgaum District ;

(*b*) the number of cases disposed and the number of cases pending in each taluk of Belgaum District ;

(*c*) the steps taken to reduce the pendency ?

Sri M. Y. GHORPADE (Minister for Finance).—

(*a*) and (*b*) A Talukwise statement of the number of returns received, the number of cases disposed and the number of cases pending during the years 1966-67 to 1970-71 is appended.

(SRI M. Y. GHORPADE)

(c) Action has been taken to reduce the pendency by transferring some of the Revenue Taluks of Belgaum District to the jurisdiction of the Agricultural Income Tax Officer, Dharwar, Regular Agricultural Income-Tax Officer, Bijapur and the Additional Agricultural Income-Tax Officer, Bijapur.

ಶ್ರೀ ಜೆ. ಎಸ್. ಅಮ್ಮಣ್ಣವರ್.—1966 ರಿಂದ 71 ನೇ ಇಸವಿಯವರೆಗೆ ತಂಬಾಕು ಬೆಳೆಯಲು 7 ಎಕರೆಯಷ್ಟು ಜಮೀನು ಕೊಟ್ಟಿದ್ದರೆ, ನಾಲ್ಕು ವರ್ಷಗಳಾದ ಮೇಲೆ ಅದನ್ನು ಪುನಃ ಅವರಿಂದ ವಾಪಸ್ಸು ತೆಗೆದುಕೊಳ್ಳುತ್ತಾರೆ. ಅಂದಮೇಲೆ 1966ನೇ ಇಸವಿಯಿಂದ ಆರೇಳು ವರ್ಷಗಳ ಅಸೆಸ್‌ಮೆಂಟನ್ನು ಈಗ ಪ್ರೊಡ್ಯೂಸ್ ಮಾಡಬೇಕೆಂದರೆ, ಅವನ ಹತ್ತಿರ ಏನೂ ಇರುವುದಿಲ್ಲ. ಆದರೆ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಆಫೀಸರ್ ಆರ್ಬಿಟ್ರರಿಯಾಗಿ ಕೆಲವರನ್ನು ಹಿಡಿಯುತ್ತಿದ್ದಾರೆ. ಇದರಿಂದ ರೈತರಿಗೆ ತೊಂದರೆಯಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎಂ. ವೈ. ಘೋರ್ಪಡೆ.—ಬೆಳಗಾಂ ಡಿವಿಷನ್ನಿನಲ್ಲಿ 2,400 ರೂಪಾಯಿಗಳವರೆಗೆ ವ್ಯವಸಾಯ ಆದಾಯ ತೆರಿಗೆಯನ್ನು ಕೊಡತಕ್ಕವರ ಚೌಕಟ್ಟಿನಲ್ಲಿ ಒಂದು ಸಾವಿರ ಜನರು ಇದ್ದಾರೆ. ಹಲವಾರು ಕಾರಣಗಳಿಂದ ಪೆಂಡಿಂಗ್ ಕೇಸುಸ್ ಕೆಲವು ಇವೆ. ಆದರೆ ಮಾನ್ಯ ಸದಸ್ಯರು ಹೇಳುವಷ್ಟು ಮಟ್ಟಿಗೆ ಅಲ್ಲಿ ತೊಂದರೆಯಾಗಿದೆ ಎಂಬುದು ಈ ಪ್ರಶ್ನೆಗೆ ಅಡಕವಾಗಿಲ್ಲ. ಈ ತೊಂದರೆಗಳನ್ನು ಉತ್ಪಾದಿಸುವುದಕ್ಕೆ ಸಾಧ್ಯವಿದ್ದರೆ, ಅದನ್ನು ಮಾಡಲಾಗುತ್ತದೆ. ಪೆಂಡಿಂಗ್ ಕೇಸುಸ್ ಹಲವಾರು ಕಾರಣಗಳಿಂದ ಇರಬಹುದು. ಬ್ರಷ್ಟಾಚಾರವೂ ಇರಬಹುದು. ಅದನ್ನು ನಿರಪಡಿಸಿ ಎಂಬುದಾಗಿ ಮಾನ್ಯ ಸದಸ್ಯರು ಕೇಳುವುದಾದರೆ, ಅದನ್ನು ವಿಚಾರ ಮಾಡಲಾಗುತ್ತದೆ.

ಶ್ರೀ ಜೆ. ಎಸ್. ಅಮ್ಮಣ್ಣವರ್.—ಅಪೆಂಡಿಕ್ಸ್‌ನಲ್ಲಿ ಕೊಟ್ಟಿರುವ ಪ್ರಕಾರ ನೋಡಿದರೆ ಮೂರು ಜಿಲ್ಲೆಗಳಲ್ಲಿ ಅಧಿಕಾರಿಗಳ ಜೊತೆಯಲ್ಲಿ ಸುಮಾರು 900 ಜನರು ಕೆಲಸ ಮಾಡುತ್ತಾ ಇದ್ದರೂ ಅಸೆಸ್‌ಮೆಂಟ್ ಇನ್ನೂ ಆಗುತ್ತಲೇ ಇದೆ. ಈಗ ಎಂಟು ವರ್ಷಗಳ ಅಸೆಸ್‌ಮೆಂಟ್ ಮಾಡಿಸಿ ಈಗಲೇ ಆ ಅಧಿಕಾರಿಗಳಿಗೆ ಲೆಕ್ಕಪತ್ರಗಳನ್ನು ರೈತರು ಪ್ರೊಡ್ಯೂಸ್ ಮಾಡಬೇಕೆಂದರೆ ಅದು ಬಹಳ ಅಸಾಧ್ಯವಾಗುತ್ತದೆ. ಸರ್ಕಾರಕ್ಕೆ ಹಣವೇನೂ ಬರುತ್ತಲ್ಲೂ ಇಲ್ಲ. ಅದಕ್ಕೋಸ್ಕರ ಶೀಘ್ರವಾಗಿ ಇರತಕ್ಕ ಪೆಂಡಿಂಗ್ ಕೇಸುಸ್ಸನ್ನು ವಿಲೇವಾರಿ ಮಾಡುವುದಕ್ಕೋಸ್ಕರ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ವೈ. ಘೋರ್ಪಡೆ.—ಬೆಳಗಾಂ ಡಿವಿಷನ್ನಿನಲ್ಲಿ ಅಗ್ರಿಕರ್‌ಚರಲ್ ಇನ್‌ಕಂಟ್ಯಾಕ್ಟ್ ನಿಂದ ಬರತಕ್ಕ ಹಣ 3—4 ಲಕ್ಷ ರೂಪಾಯಿಗಳು ಮಾತ್ರ. ಅಂದರೆ ಪೆಂಡಿಂಗ್ ಕೇಸುಸ್ಸನ್ನು ಕಡಿಮೆ ಮಾಡುವ ದೃಷ್ಟಿಯಿಂದ 1971ರಲ್ಲಿಯೇ ಸೋಕಾಕ್, ಸೌಂದತ್ತಿ, ರಾಮದುರ್ಗ ತಾಲ್ಲೂಕುಗಳನ್ನು ಬೇರ್ಪಡಿಸಿ ಧಾರವಾಡ ಡಿವಿಷನ್ನಿಗೆ ಸೇರಿಸಲಾಯಿತು. ಇನ್ನು ಕೆಲವನ್ನು ಬಿಜಾಪುರಕ್ಕೆ ಸೇರಿಸಲಾಯಿತು. ಈ ವರ್ಷ ಸುಮಾರು 5 ಸಾವಿರ ಕೇಸುಸ್‌ಗಳನ್ನು ತೀರ್ಮಾನ ಮಾಡುವುದಕ್ಕೆ ಸಾಧ್ಯವಿದೆ. ಇಷ್ಟು ವೇಗದಲ್ಲಿ ಹೋದರೂ ಎಲ್ಲಾ ಪೆಂಡಿಂಗ್ ಕೇಸುಗಳನ್ನು ಡಿಸ್‌ಪೋಜ್ ಮಾಡುವುದಕ್ಕೆ ಇನ್ನು ಎರಡು ಮೂರು ವರ್ಷಗಳಾದರೂ ಬೇಕಾಗುತ್ತದೆ. ಒಂದೇ ವರ್ಷದಲ್ಲಿ ಆವೆಲ್ಲವನ್ನೂ ಡಿಸ್‌ಪೋಜ್ ಮಾಡಬೇಕೆಂದು ಹೇಳಿದರೆ ಇನ್ನೂ ಎರಡು ಮೂರು ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸ್ ಆಫೀಸರುಗಳನ್ನು ನೇಮಕ ಮಾಡಬೇಕಾಗುತ್ತದೆ. ಒಬ್ಬ ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಆಫೀಸರಿಗೆ 25 ಸಾವಿರ ರೂಪಾಯಿಗಳವರೆಗೆ ಖರ್ಚಾಗುತ್ತದೆ ಅಂದಮೇಲೆ ಮೂರು ಅಗ್ರಿಕಲ್‌ಚರಲ್ ಆಫೀಸರ್ಸ್ ಮತ್ತು ಅವರ ಸಿಬ್ಬಂದಿ ಎಲ್ಲರಿಗೂ ಸುಮಾರು 75 ಸಾವಿರ ಅಥವಾ ಒಂದು ಲಕ್ಷ ರೂಪಾಯಿ ಖರ್ಚಾಗುತ್ತದೆ. ಈ ಡಿವಿಷನ್ನಿನಿಂದ ಬರುವ ವಣ 3 ಲಕ್ಷ 50 ಸಾವಿರ ರೂಪಾಯಿಗಳು ಇದೆ. ಈ ಒಂದು ದೃಷ್ಟಿಯಿಂದಲೇ ಅನೇಕ ತಾಲ್ಲೂಕುಗಳನ್ನು ಬೇರ್ಪಡಿಸಲಾಗಿದೆ. ಅದರ ಜೊತೆಗೆ ಈಗ ಒಬ್ಬಿಬ್ಬರು ಅಗ್ರಿಕರ್‌ಚರಲ್ ಇನ್‌ಕಂಟ್ಯಾಕ್ಸ್ ಆಫೀಸರುಗಳನ್ನು ಜಾಸ್ತಿಮಾಡುವ ಅಭಿಪ್ರಾಯವನ್ನು ಈ ಸಭೆ ಹೊಂದುವುದಾದರೆ, ಅವನ್ನು ವಿಚಾರಮಾಡಿ ನೋಡೋಣ.

ಶ್ರೀ ಜೆ. ಎಸ್. ಆಮ್ಮಣ್ಣವರ್.—ಹೀಗೆ ಹೆಚ್ಚು ಹಣ ಸಿಬ್ಬಂದಿ ಮೇಲೆ ಖರ್ಚಾಗುವುದರಿಂದ ಸರ್ಕಾರಕ್ಕೆ ಇದರಿಂದ ಇನ್‌ಕಂ ಕಡಿಮೆಯಾಗಿ ಬರುತ್ತಿರುವುದರಿಂದ ಇನ್ನು ಮುಂದೆ ಇನ್‌ಕಂ ಟ್ಯಾಕ್ಸ್ ಹಾಕುವುದನ್ನು ಆವರಿಗೆ ಕಡಿಮೆಮಾಡಿ. ಎರಡನೆಯದಾಗಿ ಇದು ಒಂದು ಕಮರ್ಷಿಯಲ್ ಕ್ರಾಪ್. ಆದ್ದರಿಂದ ಲ್ಯಾಂಡ್ ರೆವಿನ್ಯೂ ತರಹದಲ್ಲಿ ಪ್ರತಿಯೊಂದು ಎಕರೆಗೆ ಇಷ್ಟು ತೆರಿಗೆ ಯೆಂದು ಪನೂಲು ಮಾಡಿ. ಈ ರೀತಿಯಾಗಿ ಮಾಡಿ ರೈತರಿಗೆ ಹಾಗೂ ಅಧಿಕಾರಿಗಳಿಗೆ ಇರತಕ್ಕ ತೊಂದರೆಯನ್ನು ಹೋಗರಾಡಿಸುವುದಕ್ಕೆ ಸಾಧ್ಯವೇ ?

ಶ್ರೀ ಎಂ. ವೈ. ಘೋರ್ಪಡೆ.—ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸಿನಿಂದ ಬರತಕ್ಕ ಹಣ 8 ಕೋಟಿ ರೂಪಾಯಿಗಳು ಇದೆ. ಒಂದು ಕೋಟಿ 3 ಲಕ್ಷ ರೂಪಾಯಿಗಳು ಬರೀ ಮಂಗಳೂರು ಡಿವಿಷನ್ ಒಂದರಿಂದಲೇ ಪಾತ್ರ-ಬರ ತ್ತಿದೆ. ಏತಕ್ಕೆಂದರೆ ಅಲ್ಲಿ ಕಾಫಿ ಪ್ಲಾಂಟೇಷನ್‌ಗಳು ಜಾಸ್ತಿ ಇರುತ್ತವೆ. ಎಲ್ಲೆಲ್ಲಿ ಆ ಪ್ಲಾಂಟೇಷನ್ ಇಲ್ಲ, ಅಂತಹ ಕಡೆಗಳಲ್ಲಿ ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ಕಡಿಮೆ ಆದಾಯ ಇದೆ. ಇದರಿಂದ ಅದನ್ನು ಬಿಟ್ಟುಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್‌ನ್ನು ಯಾವ ರೀತಿಯಲ್ಲಿ ಬದಲಾಯಿಸಬೇಕು, ಉತ್ತಮ ಪಡಿಸಬೇಕು ಎಂಬ ಬಗ್ಗೆ ಯೋಚನೆಮಾಡುವುದಕ್ಕೆ ಆಸ್ಪದ, ಅವಕಾಶ ಇದೆ. ಲ್ಯಾಂಡ್ ಇನ್‌ಕಂ ಯಾವ ರೀತಿ ಹೆಚ್ಚುಮಾಡಬೇಕೆಂಬ ಬಗ್ಗೆ ಕೆಲವಾರು ಕಮಿಟಿಗಳ ಶಿಫಾರ್ಸುಗಳಿವೆ ಭೂತಲಿಂಗಂ ಕಮಿಟಿಯವರು ಹಲವಾರು ಸಮಸ್ಯೆಗಳನ್ನು ಇಟ್ಟಿದ್ದಾರೆ. ಆದನ್ನು ಸಮಗ್ರ ರೀತಿಯಲ್ಲಿ ಯೋಚನೆಮಾಡಿ ಇದರ ಆದಾಯವನ್ನು ಯಾವ ರೀತಿ ಹೆಚ್ಚುಮಾಡಬೇಕೆಂಬುದರ ಬಗ್ಗೆ ಸೂಕ್ತ ಕಾಲಕ್ಕೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ತಂಬಾಕು ಮೇಲೆ ಟ್ಯಾಕ್ಸ್ ಬಿಡುವುದಕ್ಕೆ ಸಾಧ್ಯವಿಲ್ಲ. ಇದು ಒಂದು ಕಮರ್ಷಿಯಲ್ ಕ್ರಾಪ್.

(ಶ್ರೀ ಎಂ. ಮೈ. ಘೋರ್ಪಡೆ)

STATEMENT

showing the particulars of information showing the number of Agricultural Income-Tax returns received/disposed and balance.

	Name of the Taluks	1966-67			1967-68			1968-69			1969-70			1970-71		
		No. of returns received	No. of disposals	Balance	No. of returns received	No. of disposals	Balance	No. of returns received	No of disposals	Balance	No. of returns received	No. of disposals	Balance	No. of returns received	No. of disposals	Balance
1	Belgaum	...	...	...	201	81	120	170	80	90	101	21	80	70	40	30
2	Chikkodi	1,353	381	972	921	190	731	922	330	592	1,100	431	669	586	379	207
3	Hukkeri	400	327	73	684	103	581	602	130	472	529	105	424	460	150	310
4	Bailhongal	103	83	20	340	60	280	260	80	180	182	80	102	102	42	60
5	Khanapur	...	...	...	60	20	40	84	20	64	28	7	21	20	10	10
6	Gokak	295	108	187	300	115	185	454	168	286	388	152	236	186	96	90
7	Ramdurg	55	23	32	62	18	44	65	21	44	79	26	53	64	18	46
8	Parasgad	107	32	75	109	35	74	106	31	75	106	38	68	68	49	19
9	Raibag	663	242	421	745	235	510	840	400	440	916	330	586	520	420	100
10	Athani	808	340	468	834	460	374	620	410	210	514	321	193	321	246	75
	Total	3,784	1,536	2,248	4,256	1,137	2,939	4,123	1,670	2,453	3,943	1,511	2,432	2,397	1,450	947

Action has been taken to reduce the pendency by the Assessing Officers. Moreover, one Additional post of Agricultural Income-tax Officer has also been created at Bijapur with effect from 27th September 1971.